Notice of a question of Privilege under Rule 177

re : Absence of the Chief Minister

† ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ನಾನು ರೂಲ್ 177 ಮತ್ತು 178ರ ಕೆಳಗೆ ನೋಟಿಸ್ ಕೊಟ್ಟಿದ್ದೆ. ಅದು ಬಹಳ ಮುಖ್ಯವಾದುದು. ಕಳೆದ ನಾಲ್ಕು ದಿವಸದಿಂದ ಈ ಮನೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಗೈರು ಹಾಜರಿಯನ್ನು ನೋಡುತ್ತಿದ್ದೇವೆ. 18ನೇ ತಾರೀಖು ಮೈಸೂರಲ್ಲಿ ಮುಷಾರಿಲ್ಲ ಎಂದು ತಮಗೆ ಪತ್ರ ಬರೆದಿದ್ದಾರೆ. 19–20ನೇ ತಾರೀಖು ಆರ್ಜೆಂಟ್ ಕೆಲಸಕ್ಕಾಗಿ ಹೆಡ್ ಕ್ವಾರ್ಟರ್ಸ್‌ನಲ್ಲಿ ಇರೋದಿಲ್ಲ ಎಂದು ತಮಗೆ ಪತ್ರ ಬರೆದಿದ್ದಾರೆ. ಇವತ್ತಿನ ಪತ್ರಿಕೆಯಲ್ಲಿ ಅವರ ಫೋಟೋ ಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳು ನಗರದ ಒಂದು ಸಮಾರಂಭದಲ್ಲಿ ಭಾಗವಹಿಸಿ ಭಾಷಣ ಮಾಡಿದ್ದಾರೆ. ಸುಮಾರು ಒಂದು ಘಂಟೆ ಕಾಲ ಈ ಮನೆಯಲ್ಲಿ ಇರಲಿಕ್ಕೆ ಸಾಧ್ಯವಿರಲಿಲ್ಲವೆ ? ಬೆಂಗಳೂರಿನಲ್ಲಿ ಇರುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಮಂತ್ರಿ ಮಂಡಲದ ಸಭೆ ನಡೆದಿದೆ ಪಕ್ಷದ ಸಭೆ ನಡೆದಿದೆ. ಪಕ್ಷದ ಸಭೆಗಳಲ್ಲಿ ಭಾಗವಹಿಸಿದ್ದಾರೆ. ಯಾವ ಉದ್ದೇಶದಿಂದ ಈ ಮಾತನ್ನು ಹೇಳುತ್ತಿದ್ದೇನೆಂದರೆ ಮಾನ್ಯ ಮುಖ್ಯ ಮಂತ್ರಿಗಳು ಹೊರಗಿನ ಕಾರ್ಯಕ್ರಮಗಳಲ್ಲಿ ಹಾಗೂ ಸಮಾರಂಭಗಳಲ್ಲಿ ಭಾಗವಹಿಸಿ, ಈ ಮನೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸದೆ ಈ ಮನೆಯ ಸದಸ್ಯರ ಹಾಗೂ ಈ ಮನೆಯ ಹಕ್ಕಿಗೆ ಚ್ಯುತಿ ತಂದಿದ್ದಾರೆ, ಅಗೌರವ ಆಗುವ ರೀತಿಯಲ್ಲಿ ನಡೆದುಕೊಂಡಿದ್ದಾರೆ. ನಿನ್ನೆ ದಿವಸ ಬೊಮ್ಮಾಯಿಯವರಿಗೆ ಪ್ರಯಾಣ ರದ್ದಾಯಿತು. ನಾನು ಒಪ್ಪುತ್ತೇನೆ, ಸರ್ಕಾರದ ಮಹತ್ವದ ಕೆಲಸ ವಿದ್ದರೆ ಹೋಗಬೇಕಾಗುತ್ತದೆ. ಆವರು ಏನಾಗಿ ಕೆಲಸಕ್ಕೆ ಹೋಗಿದ್ದಾರೆಯೋ ಸರ್ಕಾರದ ಕೆಲಸಕ್ಕೆ ಹೋಗಿದ್ದಾರೆಯೇ ಎಂಬುದು ಸ್ಪಷ್ಟವಾಗಿ ಬೇಕು. ಮಹಾರಾಷ್ಟ್ರದ ಮುಖ್ಯಮಂತ್ರಿಗಳೊಡನೆ ಪಕ್ಷದ ಕೆಲಸಕ್ಕಾಗಿ ಹೋಗಿದ್ದಾರೆ, ಅವರ ಪ್ರವಾಸದ ಖರ್ಚಿಗಾಗಿ ಏನು ಹಣ ಹೋಗಿದೆ. ಅದು ಸರ್ಕಾರದ ಬೊಕ್ಕಸದಿಂದ ಹೋಗಿದೆಯೋ ? ಸ್ವಂತ ಬೊಕ್ಕಸದಿಂದ ಹೋಗಿದೆಯೆ ? ಅಥವಾ ಪಕ್ಷದ ಬೊಕ್ಕಸದಿಂದ ಹೋಗಿದೆಯೋ ಎಂಬುದು ಸ್ಪಷ್ಟವಾಗಬೇಕು. ಕಳೆದ ಮೂರು ನಾಲ್ಕು ದಿವಸಗಳಿಂದ ಅವರ ಗೈರು ಹಾಜರಿ ಬಗ್ಗೆ ಚರ್ಚೆ ನಡೆದಿದೆ. ಇದನ್ನು ಬಹಳ ಗಂಬೀರವಾಗಿ ಪರಿಗಣಿಸಬೇಕಾಗಿದೆ.

ಅಧ್ಯಕ್ಷರೆ, ಈ ಮನೆಯ ಗೌರವವನ್ನು, ಈ ಮನೆಯ ಸದಸ್ಯರ ಹಕ್ಕನ್ನು ಕಾಯುತಕ್ಕದ್ದು ತಪ್ಪು ಮೇಲೆ ಇದೆ. ದೈರ್ಯದಲ್ಲಿ ಹುಷಾರ್ ಇಲ್ಲ ಎಂದು ಈ ಮನೆಗೆ ಕಾಗದ ಬರೆಯುತ್ತಾರೆ. ಪಕ್ಷದ ಮತ್ತು ಮಂತ್ರಿಮಂಡಲದ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಾರೆ. ಇವೊತ್ತು ಬೆಂಗಳೂರಿನಿಂದ ಹೊರಗೆ ಹೋಗುತ್ತಿದ್ದೇನೆ ಎಂದು ತಿಳಿಸಿ, ಬೇರೆ ಸಮಾರಂಭಗಳಲ್ಲಿ ಭಾಗವಹಿಸುತ್ತಿರುವುದರ ಬಗ್ಗೆ ಬಹಳ ಗಂಬೀರವಾಗಿ ಆಲೋಚನೆ ಮಾಡಬೇಕು. ಮುಖ್ಯ ಮಂತ್ರಿಗಳು ಇವೊತ್ತು ಜನರ ಪ್ರತಿನಿಧಿಗಳು. ಈ ಸಭೆ ನಡೆಯುತಕ್ಕ ಕಾಲದಲ್ಲಿ ಹೆಚ್ಚು ಸಮಯವನ್ನು ಈ ಸಭೆಯಲ್ಲಿಯೇ ಕಳೆಯಬೇಕಾಗುತ್ತದೆ. ಇದನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ನಾನು ವಿರೋಧ ಪಕ್ಷದ ನಾಯಕನಾಗಿ ಕೆಲವು ವಿಚಾರಗಳನ್ನು ಎರಡು ದಿವಸದಿಂದ ಹೇಳಿದ್ದೇನೆ. ಇದನ್ನು ಹೇಳುವಾಗ ವೈಯಕ್ತಿಕವಾಗಿ ನನಗೆ ಅಷ್ಟೊಂದು ಚಿಂತೆಯಿಲ್ಲ. ವಿರೋಧ ಪಕ್ಷದ ನಾಯಕನಾಗಿ ವಿಚಾರ ಹೇಳುವಾಗ ಸೌಜನ್ಯ ಮತ್ತು ಕರ್ತವ್ಯದ ದೃಷ್ಟಿಯಿಂದ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಇರಬೇಕು. ಈ ಸಭೆಗೆ ಅಗೌರವ ಮಾಡಿದಂಥ ಮಾನ್ಯ ಮುಖ್ಯ ಮಂತ್ರಿಗಳವರ ಮೇಲೆ ಕ್ರಮ ತೆಗೆದುಕೊಳ್ಳುವ ಸಂದರ್ಭ ಬಂದಿದೆ.

(ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

Sir, I am extremely sorry to have given Notice of Breach of Privilege against the Leader of the House. I know, normally such a Notice should not be given. But the circumstances and the conduct of the Chief Minister forced me to give such a Notice. From the commencement of this Session we have been observing that the Chief Minister is deliberately and purposefully absenting himself from attending the house. It is a clear dereliction of duty

and a most disrespect shown to the House. He might have been engaged in national and international politics-we are not concerned with it. But his primary duty is to be present in this House. I have no objection for his taking part in any function. It is his bounded duty to attend the House; otherwise he must give a correct and true explanation to the House. The two letters that have been written to the Hon'ble Speaker clearly indicate the reasons for his absence: (1) sickness and (2) going out of headquarters. I would not say that they are false, but I would only say that they are not true. He has given those reasons, but he has openly participated in a function in this City when the House is going on. What shall we say for this? I would like to read one or two sentences from "Practice & Procedure of Parliament by Kaul and Shakdher" in this connection. It says at page 219:

> "The term "breach of privilege" means a disregard of any of the rights, privileges and immunities either of members of Parliament individually, or of the House in its collective capacity. After due inquiry, a breach of privilege is punished in the same way as courts of law punish for contempt of their dignity or authority."

Sir, along with my notice, I have given 'Samyukta Karnataka and Prajavani' dailies, wherein the photograph of the Chief Minister, participating in a function, has appeared. From the photograph I can say that he is hale and healthy. One could see his cheerful photograph in those dailies. His lengthy speech at that function is also published. I know that as a Chief Minister he is bound to participate in functions. But, if he writes a letter to the Hon'ble Speaker that he will be out of headquarters and participates in a function in Bangalore, is it not contempt of the House?

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಬೆಳಿಗ್ಗೆ ಹಾಜರಿದ್ದು ಮಧ್ಯಾಹ್ನ ಹೋಗಿರಬಹುದು.

SRI S. R. BOMMAI.—Sir, I know the timings of the Plane also; it is after 2-30 P.M. The House meets at One 'O' Clock. The evening plane is at 6-30 P.M. The other day, two questions had to be postponed for his absence. For the last 3 days questions are being postponed on account of his absence. By this, the right of the Member who has asked the question in a way, is affected. This is a serious matter. I strongly appeal to the Chair that this matter must be viewed seriously. Because he is the Leader of the House and the Chief Minister, no sympathy, no favouritism and no concession should be shown to him. Otherwise, the Chair would be failing in its duty in protecting the honour and dignity of the House. We have been repeating this since the commencement of the Session, but nothing has happened. We have not come here only to make

speeches. We make speeches and ask questions with a purposeful object. It is the duty of the Government and more so of the Chief Minister to be present and reply to our questions. Therefore, this is a fit case to be referred to a Privileges Committee.

I would submit that I was late by 5 or 10 minutes in submitting this Notice. So far as Rule 178 is concerned, it should have been given before the commencement of the Session. In view of the seriousness of the matter, I request the Chair to condone the delay of about 5 or 10 minutes in giving the Notice and that the matter be referred to the Privileges Committee.

ಶ್ರೀ ಬಿ. ಬಸವಲಿಂಗಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಶ್ರಮವಹಿಸಿ ಈ ಒಂದು ನಿರ್ಣಯವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಅವರು ಈಗ ಈ ಸಭೆಯಲ್ಲಿ ಭಾಗವಹಿಸಲಿಕ್ಕೆ ಎಷ್ಟು ಶ್ರಮವಾಗುತ್ತದೆ ಎನ್ನುವುದನ್ನು ಅವರೇ ಪ್ರದರ್ಶನ ಮಾಡಿದ್ದಾರೆ. ಮೈಯಲ್ಲಿ ಚೆನ್ನಾಗಿ ಇಲ್ಲದೇ ಇರತಕ್ಕದ್ದು ಒಂದು. ನನ್ನ ಅನುಭವದಲ್ಲಿ ಹೇಳಬೇಕಾದರೆ ಈ ಸಭೆಯಲ್ಲಿ ಭಾಗವಹಿಸಲಿಕ್ಕೆ ಬಹಳ ಶ್ರಮ ಬೇಕಾಗುತ್ತದೆ, ಅಲ್ಲದೆ ಎಲ್ಲವನ್ನು ಅಭ್ಯಾಸ ಮಾಡಬೇಕಾಗುತ್ತದೆ.

ಶ್ರೀ ಮಳ್ಳೂರು ಆನಂದರಾವ್. -ಮಾನ್ಯ ಬಸವಲಿಂಗಪ್ಪನವರು ಈಗ ಹೇಳುವುದಕ್ಕೆ ಶ್ರಮಪಡುತ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೆ, ಈಗ ಅವರು ಶ್ರಮಪಟ್ಟು ಭಾಗವಹಿಸತಕ್ಕದ್ದನು ನೋಡಿದರೆ ನಾವು ಶ್ರಮಪಡಬೇಕಾಗುತ್ತದೆ. ಆದರೆ ಇಲ್ಲಿ ಬಂದು ಶ್ರಮಪಟ್ಟು ಸಭೆಯಲ್ಲಿ ಭಾಗವಹಿಸಿ ನಿಮಗೆ ಉತ್ತರ ಕೊಡುವ ಶಕ್ತಿ ಅವರಲ್ಲಿ ಇಲ್ಲದಿರಬಹುದು. ಆದ್ದರಿಂದ ಈ ಸಿಕ್ ರಿಪೋರ್ಟ್ ಕಳಿಸಿಕೊಟ್ಟಿದ್ದಾರೆ.

ಶ್ರೀ ಮಳ್ಳೂರು ಆನಂದರಾವ್.—ಈ ಸದಸ್ಯತ್ವಕ್ಕೆ ಬರಬೇಕಾದರೆ ಯಾವ ರೀತಿ ಎನರ್ಜಿಗೆ ಬೇಕಾದ ಮೆಡಿಸನ್ಸ್‌ನ್ನು ತೆಗೆದುಕೊಂಡು ಬರಬೇಕಾಗುತ್ತದೆ ಎಂಬುದನ್ನು ತಿಳಿದುಕೊಂಡು ಮೆಡಿಕಲ್ ಚೆಕಪ್ ಮಾಡಿಸಿಕೊಂಡು ಬರಲು ಜೆಸ್‌ಲೋಕ್ ಆಸ್ಪತ್ರೆಗೆ ಹೋಗಿದ್ದಾರೆಂದು ಕಾಣುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಯಾವುದೋ ಒಂದು ಸಭೆಯಲ್ಲಿ ಹಾಜರಾಗಿರುವುದರಿಂದ ಅವರು ಆರೋಗ್ಯವಾಗಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಆ ವಿಷಯವನ್ನೇ ದೊಡ್ಡದು ಮಾಡಿ ಅದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಲು ಅವಕಾಶ ಕೊಡಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿರುವುದು ಈ ಸಭೆಯ ಗೌರವಕ್ಕೆ ಧಕ್ಕೆ ತರತಕ್ಕಂಥ, ಸಭೆಯ ಸದಸ್ಯರ ಗೌರವಕ್ಕೆ ಧಕ್ಕೆ ತರತಕ್ಕಂಥ ವಿಚಾರ ಎಂಬುದನ್ನು ನಾನು ಹೇಳಬಯಸುತ್ತೇನೆ. ನಾನು ಹೈದರಾಬಾದ್‌ಗೆ ನಿನ್ನೆ ಹೋಗಿದ್ದೆ. ಹೋಗುವಾಗ ನನ್ನನ್ನು ಏನಾದರೂ ಉತ್ತರ ಕೊಡುವಂಥಾದ್ದಿದ್ದರೆ ಅದನ್ನು ಮುಂದಕ್ಕೆ ಹಾಕಬೇಕೆಂದು ಹೇಳಿದ್ದೆ. ಅದೇ ರೀತಿ ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಹೀಗೆ ಸಿಕ್ ರಿಪೋರ್ಟ್ ಕೊಟ್ಟು ಹೋಗಿದ್ದಾರೆ.

ಶ್ರೀ ಗೋವಿಂದ ಪಿ. ಒಡೆಯರ್.—ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಬಸವಲಿಂಗಪ್ಪನವರ ಮಾತು ಹೇಗಿದೆ ಎಂದರೆ ಈ ಶಾಸನ ಸಭೆಯ ಇತಿಹಾಸದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಪ್ರೊಟೆಕ್ಟ್ ಮಾಡುವುದಕ್ಕೆ ಹೊರಟಿದ್ದಾರೆ ಎಂದು ತೋರಿಸುವಂತಿದೆ. ಇದು ನಿಜವಾಗಿಯೂ ದುರ್ದೈವದ ಮತ್ತು ದುಃಖದ ಸಂಗತಿ ಎಂದು ಹೇಳಬೇಕಾಗುತ್ತದೆ. Unless a Minister is physically incapacitated to attend the House, he is duty-bounded to attend the House. ಸ್ವಾಮಿ, ಅವರು ಊರಿಗೆ ಹೋಗುವುದಕ್ಕಿಂತಲೂ ಇಲ್ಲಿಗೆ ಬಂದು ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದು ಅವರ ಆದ್ಯ ಕರ್ತವ್ಯ. ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆಂದರೆ.....

MR. SPEAKER.—Notice is given according to rule 177 by the Hon'ble Leader of the Opposition Sri S. R. Bommai and Sri Lakshmi Sagar. The Hon'ble Member Sri Bommai has explained how it is admissible. I wanted to know the opinion of the Government in this regard. I have heard the views of the Government. Now I think Sri Vadeyaraj's sargument, according to this rule, is restricted. There is no reason to argue this case or offer his explanation. I want the hon'ble member to study the relevant rule.

SRI GOVIND P. VADEYARAJ.—There is a contradiction in the statement made and there is contradiction in the behaviour. ನಾನು ತಮ್ಮ ಅಪ್ಪಣೆ ತೆಗೆದುಕೊಂಡು ಮಾತನಾಡುತ್ತಿದ್ದೇನೆ.

SPEAKER.—I want the hon'ble member to go through the rule.

SRI GOVIND P. VADEYARAJ.—The Hon'ble Minister for Revenue has defended an indefensible attitude of the Chief Minister, that is where we are concerned.

MR. SPEAKER.—I have heard the Minister. Now I request the hon'ble member to abide by the rule.

SRI GOVIND P. VADEYARAJ.—I wanted to clarify the contradiction involved in the statement of the Chief Minister and the Revenue Minister.

† Sri A. LAKSHMI SAGAR.—I am glad the Hon'ble Minister has admitted the fact that the Chief Minister has left the State for Bombay for no official business. Our allegation is that the Chief Minister has not told this House that he is going to Bombay on official duty and therefore it is not possible for him to be present in the House; while the Minister who spoke for the Government has not stated anything in reply to the matter raised by the Leader of the Opposition. Therefore I presume that the Government does admit that the Chief Minister has left Bangalore City for Bombay without any ostensible Government or official business. If I may say so with respect the Chief Minister has gone to Bombay presumably for his party-work. There is no other conclusion to be drawn from the reference made by the spokesman for the Government.

The other point that was raised by the Leader of the Opposition was whether the Chief Minister has gone to Bombay for official business or for party business. If he has gone there for business other than official or Government business, has he gone there at the expense of the State Government or at his own expense or at the expense of the party? There is no answer to this question either. Therefore Sir, it is clear, I presume that the Government admits this position that the Chief Minister has shown greatest contempt to the members of this House,

I cannot visualise a situation where the Leader of the House and the Chief Minister of the State should take upon himself the attitude of absenting himself from the sittings of this House at least even for a short while when he is in town and thereby has shown an act which cannot be brushed aside. You are the custodian of the rights and privileges of the members of this House and I appeal to you to safeguard the interests of the members. It is not a matter to be treated leniently. This is a matter concerning the attitude of a member in the first instance and of the Chief Minister and the Leader of the house. The explanation put forward by the spokesman of the Government for the absence of the Chief Minister is not convincing. If I may say so, he has made a deliberate, untrue statement. He does not seem to have any regard for the rights and the privileges of the members, and the subsequent conduct, he has betrayed in going away from Bangalore City to Bombay as reported in the press. The Government spokesman who stoutly defended the Chief Minister for his absence does not in effect gave any convincing answer for the absence of the Chief Minister. What better or more striking instance of the attitude of the Chief Minister and acts of utter contempt, ridiculous way of treating this House in absenting himself from the sittings of this House is necessary? Therefore, Sir I appeal to you since you are the custodian of the privileges of the Members of the House and also a person who preside over the destiny of the proceedings of this House, I request you to take serious notice of the absence of the Chief Minister and come to a necessary and purposeful conclusion on the Privilege Motion raised in the House. I can read your mind I can see.

12-Noon

MR. SPEAKER.—How can you read ?

SRI A. LAKSHMI SAGAR.—I am not trying to say anything in anticipation, I have not prejudiced my mind. If I may say so, I am a lawyer by profession.

SRI B. BHASKAR SHETTY.—He is arguing in the House as if he is arguing in the Court. But this is not a Court ?

(Interruption)

SRI GOVIND P. VODEYARAJ.—On a point of order Sir. The Honourable Deputy Leader of the Opposition was speaking and without raising any point of orders is it relevant or proper on the part of the Minister for P.W.D. to stand up and speak; is it allowed under the Rules of Procedure ? Secondly, you were good enough to tell me that those who have signed could speak after obtaining the

permission from the Chair on this Privilege Motion issue, I want to know under what provisions of the Rules the Minister is allowed to speak ?

SRI S. BANGARAPPA.—I want to know under what provisions of the Rules the hon'ble Member is allowed to speak now ?

SRI GOVIND P. VODEYARAJ.—It is not his business to ask. The Chair is there who will give permission. The Chair has allowed me to raise this point of order.

MR. SPEAKER —Whenever a member wants to say something he has to indicate either by showing his hand or by standing. When the Chair calls him he has to speak. Sri Bangarappa, Hon'ble Minister for P.W.D. has just rose up and tried to say something. But he did not express anything. So, there is no point order as raised by hon'ble Member. Secondly, when I requested Mr. Lakshmi Sagar to resume his seat, he has agreed to do so, So, there is no point of order.

SRI A. LAKSHMI SAGAR.—Sir, I have only one more point, which is the last point. This is not a matter in which due regard should be given to technicalities of the Privilege Motion given notice of in the House. Please take the totality of the circumstances that arise for consideration in the matter relating to the Privilege Motion. With your permission, may I read the last paragraph of Rule 180 on page 69 which is as follows :

> "Provided further that the Speaker may, if he is satisfied about the urgency of the matter, allow a question of privilege to be raised at any time during the course of sitting after the disposal of questions"

You were good enough to point out that the notice of privilege motion was not given strictly in accordance with Rule 177. My only endeavour is that you have ample power as the custodian of the rights and privileges of this House. Rules are so made as to give ample powers and opportunity to the Chair in the House. It is not as if I have transported a rule to Rule 180 and trying to read the same. All that I am trying to clarify and convince is that you may allow privilege motion not withstanding the late submission of the same made under the Rule 177. You may still allow since your are the custodian of the rights and privilege of the members of this House. That is the endeavour I am trying to make in view of the special situation and seriousness of the matter that is raised before this House. I and my colleagues are not happy in moving this Motion. We are certainly not happy, But we are constrained to bring to the notice of the House if I may say so that a continued and deliberate

contemptuous attitude is being shown by the Chief Minister to this House. Therefore, I request with all humility at my command to overlook if there are any small and trivial technical matters in the way, and allow the Privilege Motion to be discussed and take up the follow-up action that logically follows from the Privilege Motion.

MR. SPEAKER.—I will go through all the aspects and examine it. And if the House has no objection, I will give my ruling on Monday.

SRI H. D. DEVE GOWDA.—Under Rule 312 I have sent a Motion.

MR. SPEAKER.—It is a matter which required legal examination. I have referred the notice to the Law Department and the Law Minister. I think it may be possible for me to include it on Monday or Tuesday. I will see that it is posted in the Agenda on Monday or Tuesday after obtaining the remarks from the Law Department.

SRI H. D. DEVE GOWDA.—Even though I do not know the ABCD of law as a member of this House, I feel that there is no to need to take the opinion of the Law Department to admit in the House under the Rules of Procedure.

ಅಧ್ಯಕ್ಷರು.—ಕಾನೂನು ಮಂತ್ರಿಗಳಿಂದ ಅದರ ಬಗ್ಗೆ ವರದಿ ಬರಬೇಕು. ಆ ವರದಿ ಬಂದ ಮೇಲೆ ನಾನು ತೆಗೆದುಕೊಳ್ಳುತ್ತೇನೆ.

SRI H. D. DEVEGOWDA.—As per Chandrakantharaj Urs, a legal expert, it does not require legal opinion.

Non-official Resolution

re: relieving the weaker sections of the community by amending the Debt Relief Act.

ಶ್ರೀ ಎಚ್. ಗಂಗಾಧರನ್ (ಕೃಷ್ಣರಾಜ).—"ಬ್ಯಾಂಕುಗಳು, ಸರ್ಕಾರ ಹಾಗೂ ಸಹಕಾರ ಸಂಘಗಳಿಂದ ಪಡೆದ ಸಾಲದಿಂದ ಸಮಾಜದಲ್ಲಿರುವ ದುರ್ಬಲ ವರ್ಗದವರಿಗೆ ಸಹಾಯವನ್ನು ಒದಗಿಸಿಕೊಡುವುದಕ್ಕೆ ಕರ್ನಾಟಕ ರಾಜ್ಯವ ಋಣಪರಿಹಾರ ಶಾಸನಕ್ಕೆ ತಿದ್ದುಪಡಿ ಮಾಡಬೇಕೆಂದು ಸರ್ಕಾರದವರಿಗೆ ಈ ಸಭೆ ಶಿಫಾರಸ್ಸು ಮಾಡುತ್ತದೆ" ಎನ್ನುವ ಈ ಖಾಸಗಿ ನಿರ್ಣಯವನ್ನು ಸಭೆಯು ಮುಂದೆ ವಂದಿಸುವುದಕ್ಕೆ ಇಚ್ಛೆಪಡುತ್ತೇನೆ.

The question was proposed

† ಶ್ರೀ ಎಚ್. ಗಂಗಾಧರನ್.—ಮಾನ್ಯ ಸಭಾಧ್ಯಕ್ಷರೇ, "ಸರ್ವೇ ಜನಾಃ ಸುಖಿನೋಭವಂತು" ಎನ್ನುವ ಸಿದ್ಧಾಂತದ ಮೇಲೆ ಯುಗಾಂತರಗಳಿಂದ ನಡೆದು ಬಂದ ಈ ದೇಶದಲ್ಲಿ ೧೯೭೦ನೇ ಇಸವಿಯಲ್ಲಿ ೧೦೦ಕ್ಕೆ ೪೦ ಜನ ಬಡತನದ ರೇಖೆಯಿಂದ ಕೆಳಗಿದ್ದರು. ಅದು ಬರು ಬರುತ್ತಾ ೧೯೭೫-೭೬ನೇ ಸಾಲಿಗೆ ೧೦೦ಕ್ಕೆ ೬೦ ಜನ ಬಡತನ ರೇಖೆಯಿಂದ ಕೆಳಗೆ ಇರತಕ್ಕಂಥ ಸಂದರ್ಭದಲ್ಲಿ ಆ ಬಡಜನತೆಯ ಅಭಿವೃದ್ಧಿಗಾಗಿ ಸೂಕ್ತ ಯೋಜನೆಗಳನ್ನು, ಸೂಕ್ತ ಕಾನೂನುಗಳನ್ನು ತರತಕ್ಕಂಥಾದ್ದು ಎಲ್ಲರ ಭಾಗ್ಯದ ಕೆಲಸ ಎಂದು ನಾನು ಭಾವಿಸುತ್ತೇನೆ. ಹಾಗೆ ಬಡ ಜನರಿಗೆ ಸೂಕ್ತವಾದ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೋಸ್ಕರ ಯಾವುದೇ ಪಕ್ಷವಾಗಲೀ ಉದಾತ್ತವಾದಂತಹ ಘೋರಣೆಯನ್ನು ತಳೆದು ಉಪಯುಕ್ತವಾದ ಶಾಸನವನ್ನು ರಚನೆ ಮಾಡಿದಾಗ ಅಪರು ಯಾವ ಪಕ್ಷದವರಾದರೂ ಅವರನ್ನು ಸ್ವಾಗತಿಸತಕ್ಕಂಥಾದ್ದು